ಶಾಸನ ರಚನಾ ಕಾರ್ಯಕಲಾಪಗಳು

ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮಗಳ ತಿದ್ದುಪಡಿ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಸಚಿವರು).—ಮಾನ್ಯ ಅಧ್ಯಕ್ಷರೇ ''ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ತಿದ್ದುಪಡಿಯನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ''

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ತಿದ್ದುಪಡಿಯನ್ನು ಮಂಡಿಸಲು ಅನುಮತಿ ನೀಡುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮಂತ್ರಿ ಅನುಮತಿ ನೀಡಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ತಿದ್ದುಪಡಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ತಿದ್ದುಪಡಿಯನ್ನು ಮಂಡಿಸಲಾಯಿತು.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ''ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮಗಳ ತಿದ್ದುಪಡಿಯನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

೧೨–೩೦ ಪಿ. ಎಂ.

ಶ್ರೀ ಎ. ಲಕ್ಷ್ಮೀಸಾಗರ್,—ಮಾನ್ಯ ಅಧ್ಯಕ್ಷರೇ, ವಿಧಾನ ಸಭೆಯಲ್ಲಿ ಪ್ರತಿದಿನ ಹಲವಾರು ಕಾಗದ ಪತ್ರಗಳನ್ನು ಸರಕ ರದವರು ತಮ್ಮ ಅನುಮತಿಯನ್ನು ಕೋರಿ ಇಡುತ್ತಾ ಬಂದಿರತಕ್ಕಂಥ ವಿಚಾರ ಎಲ್ಲರಿಗೂ ಗೊತ್ತಿರತಕ್ಕಂಥಾದ್ದು. ಆದರೆ ಈ ಕಾಗದ ಪತ್ರಗಳು ಕಾಲಕಾಲಕ್ಕೆ ಸಭೆಯ ಮುಂದೆ ಕಾನೂನು ಪ್ರಕಾರ ಇಡಲ್ಪಡುತ್ತಿವೆಯೇ, ಇಲ್ಲವೇ, ಈ ರೀತಿ ಕಾಗದ ಪತ್ರಗಳನ್ನು ಸಭೆಯ ಮುಂದಿಟ್ಟಾಗ ಆ ಕಾಗದ ಪತ್ರಗಳ ಪ್ರಕಾರ ಸರಕಾರ ಕ್ರಮ ತೆಗೆದುಕೊಂಡಿದೆಯೇ ಇಲ್ಲವೇ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಅಂದರೆ ಈ ಸಭೆಯ ಸದಸ್ಯರಿಗೆ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗಿರುವುದಿಲ್ಲ. ಅದು ಸಾಧ್ಯವೂ ಆಗುವುದಿಲ್ಲ. ಆದುದರಿಂದ ಈ ರೀತಿಯ ಕಾರ್ಯಕಲಾಪಗಳನ್ನು ಒಂದು ಸಮಿತಿಯ ವರು ನೋಡಿ, ಸಭೆಯ ಗಮನಕ್ಕೆ ತರುವುದಕ್ಕೆ ಅನುಕೂಲ ಮಾಡಿಕೊಡತಕ್ಕ ರೀತಿಯಲ್ಲಿ ಒಂದು ಸಮಿತಿಯನ್ನು ಕಾನ್‌ಸ್ಟಿಟ್ಯೂಟ್ ಮಾಡುವುದಕ್ಕೆ, ಈ ಸಭೆಯ ಅನುಮತಿಯನ್ನು ಕೋರುವುದಕ್ಕಾಗಿ ಈ ಒಂದು ನಿರ್ಣಯವನ್ನು ತಂದಿದ್ದೇವೆ. ಈ ಸಮಿತಿಯ ಕೆಲವು ವಿವರಗಳನ್ನು ನಾನು ಸಭೆಯ ಮುಂದಿಡುವುದಕ್ಕೆ ಇಷ್ಟಪಡುತ್ತೇನೆ. ಇದಕ್ಕೆ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳನ್ನು ಪರಿಶೀಲಿಸುವ ಸಮಿತಿ ಎಂದು ಹೆಸರು. ಈ ಸಮಿತಿಯ ರಚನೆ ಹೇಗೆ ಇರುತ್ತದೆ ಎಂದರೆ, ಇದು ೧೨ ಜನ ಸದಸ್ಯರನ್ನು ಒಳಗೊಂಡಿರತಕ್ಕಂಥಾದ್ದು. ಈ ಪೈಕಿ ೮ ಸದಸ್ಯರನ್ನು ವಿಧಾನಸಭೆಯ ಅಧ್ಯಕ್ಷರ ನಾಮ ನಿರ್ದೇಶನದ ಮೂಲಕ, ಹಾಗೂ ೪ ಜನ ಸದಸ್ಯರನ್ನು ವಿಧಾನ ಪರಿಷತ್ತಿನ ಸಭಾಪತಿಯವರು ನಾಮ ನಿರ್ದೇಶನದ ಮೂಲಕ ನೇಮಕ ಮಾಡತಕ್ಕದ್ದು. ಸಮಿತಿಯ ಕಾಲಾವಧಿ ಒಂದು ವರ್ಷಕ್ಕೆ ಮೀರಿರತಕ್ಕದ್ದಲ್ಲ. ರೂಲ್ ೨೮೯ (ಬಿ) (೧) ಪ್ರಕಾರ ಮಂಡಿಸಲಾದ ಎಲ್ಲಾ ಕಾಗದ ಪತ್ರಗಳನ್ನು ಸಮಿತಿಯು ಪರಿಶೀಲಿಸಿ ಈ ಕೆಳಕಂಡ ವಿಷಯಗಳ ಮೇಲೆ ಸಭೆಗೆ ವರದಿಯನ್ನು ಸಲ್ಲಿಸತಕ್ಕದ್ದು.

ಅ) ಸಂವಿಧಾನದ ಉಪಬಂಧಗಳಿಗನುಸಾರವಾಗಿ ಅಥವಾ ಆಧಿನಿಯಮ ನಿಯಮ ಅಥವಾ ನಿಯಮಾವಳಿಗಳನ್ನು ಪಾಲಿಸಿ ಕಾಗದ ಪತ್ರಗಳನ್ನು ಸಭೆಯಲ್ಲಿ ಮಂಡಿಸಲಾಗಿದೆಯೇ ?

ಅ) ಕಾಗದ ಪತ್ರಗಳನ್ನು ಮಂಡಿಸುವಲ್ಲಿ ನ್ಯಾಯಸಮ್ಮತವಲ್ಲದ ವಿಳಂಬವೇನಾದರೂ ಆಗಿದೆಯೇ ?

ಆ) ಆ ರೀತಿಯ ವಿಳಂಬವೇನಾದರೂ ಆಗಿದ್ದಲ್ಲಿ, ವಿಳಂಬಕ್ಕೆ ಕಾರಣಗಳನ್ನು ತಿಳಿಸುವ ವಿವರಣಾ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಗಿದೆಯೇ ಹಾಗೂ ಅಂತಹ ಕಾರಣಗಳು ತೃಪ್ತಿಕರವಾಗಿವೆಯೇ ?

ಈ) ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆಯೇ ?

ಉ) ಕನ್ನಡ ಭಾಷೆಯಲ್ಲಿ ಮಂಡಿಸಲು ಸಾಧ್ಯವಾಗದಿದ್ದ ಬಗ್ಗೆ ಕಾರಣಗಳನ್ನು ತಿಳಿಸುವ ವಿವರಣಾ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಗಿದೆಯೇ ಹಾಗೂ ಅಂತಹ ಕಾರಣಗಳು ತೃಪ್ತಿಕರವಾಗಿವೆಯೇ ?

ಸಭೆಯಲ್ಲಿ ಮಂಡಿಸಲಾದ ಕಾಗದ ಪತ್ರಗಳಿಗೆ ಸಂಬಂಧಿಸಿದಂತೆ ಅಧ್ಯಕ್ಷರು ಕಾಲಕಾಲಕ್ಕೆ ಸಮಿತಿಗೆ ವಹಿಸಿಕೊಡಬಹುದಾದ ಇತರ ಪ್ರಕಾರ್ಯಗಳನ್ನು ಸಮಿತಿಯು ಹೊಂದಿರತಕ್ಕದ್ದು. ರೂಲ್ (ಸಿ) ನಿಯಮ ೨೮೯ (ಬಿ) (೧)ನೇ ಉಪ ನಿಯಮದಲ್ಲಿ ಉಲ್ಲೇಖಿಸಿರುವ ಯಾವುದೇ ವಿಷಯಗಳನ್ನು ಪುಸ್ತಾಪಿಸಬಯಸುವ ಸದಸ್ಯರು ಅದನ್ನು ಸಮಿತಿಗೆ ಒಪ್ಪಿಸತಕ್ಕದ್ದು ಹಾಗೂ ಅದನ್ನು ಸದನದಲ್ಲಿ ಪುಸ್ತಾಪಿಸತಕ್ಕದ್ದಲ್ಲ. ಈ ರೀತಿ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳನ್ನು ಪರಿಶೀಲಿಸತಕ್ಕ ಸಮಿತಿಯು ಲೋಕಸಭೆಯೊಳಗೂ ಇದೆ, ರಾಜ್ಯ ಸಭೆಯ ಒಳಗೂ ಇದೆ. ನಮ್ಮ ದೇಶದ ಕೆಲವು ರಾಜ್ಯ ವಿಧಾನಸಭೆಗಳಲ್ಲೂ ಕೂಡ ಇದೆ, ಈ ಸಭೆಯ ಕಾರ್ಯಕಲಾಪಗಳು ಅರ್ಥಪೂರ್ಣವಾಗಿ ನಡೆಯಬೇಕಾದಂಥ ಸನ್ನಿವೇಶ ಇರುವುದರಿಂದ ಮತ್ತು ಸದಸ್ಯರು ಈ ಸಭೆಯ ಮುಂದೆ ಹಾಗೂ ವಿಧಾನ ಪರಿಷತ್ತಿನ ಮುಂದೆ ಮಂಡಿಸತಕ್ಕಂಥ ಕಾಗದ ಪತ್ರಗಳ ಮೇಲೆ ಉಸ್ತುವಾರಿ ಇಟ್ಟು ಸರಕಾರದ ಗಮನ ಸೆಳೆಯುವುದರ ಜೊತೆಗೆ, ತಪ್ಪು ಮಾಡಿದರೆ ಅವರಿಗೆ ಸರಿಯಾದ ಪಾಠವನ್ನು ಕಲಿಸಬಹುದು. ಇದಕ್ಕೆ ಅನುಕೂಲಕರವಾಗುವಂತೆ ಕಾರ್ಯಕ್ರಮದ ಪಟ್ಟಿಯನ್ನು ಈ ಸಭೆಯ ಸಮಿತಿಗೆ ವಹಿಸಿಕೊಡಬೇಕೆಂಬ ವಿಚಾರ ಈ ಸಮಿತಿಯಲ್ಲಿದೆ. ಈ ಸಮಿತಿ ಅತ್ಯಾವಶ್ಯಕವಾಗಿ ಆಗತಕ್ಕದ್ದು, ಹೌಸ್ ಕಮಿಟಿಗಳು ಇರುವ ಹಾಗೆ ಇದೂ ಒಂದು ಹೌಸ್ ಕಮಿಟಿ ಆಗುತ್ತದೆ. ಇದು ಅತ್ಯಾವಶ್ಯಕವಾಗಿ ಬೇಕಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರು ಇದಕ್ಕೆ ಬೆಂಬಲ ಕೊಟ್ಟು ಈ ಸಮಿತಿ ಅಸ್ತಿತ್ವಕ್ಕೆ ಬರುವುದಕ್ಕೆ ಸಹಾಯ ಮಾಡಬೇಕೂ ಮತ್ತು ಇದನ್ನು ಮಾಡುವುದರಿಂದ ಈ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸತಕ್ಕಂಥ ಸನ್ನಿವೇಶಗಳೂ ಬರಬಹುದು. ಇದು ಸರಕಾರದ ಕೆಲಸ ಸುಸೂತ್ರವಾಗಿ ನಡೆಯುವಂತೆ, ಜೊತೆಗೆ ಸರಕಾರ ಗಮನಹರಿಸಿ ಜವಾಬ್ದಾರಿಯಿಂದ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ. ಈ ಸಮಿತಿಗೆ ಹಾಗೂ ಇದರ ರಚನೆ ಮಾಡುವುದಕ್ಕೆ ತಾವೆಲ್ಲರೂ ಒಪ್ಪಿಗೆಯನ್ನು ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಮಂತ್ರಿಗಳು ನಮ್ಮ ಮುಂದೆ ಏನು ಒಂದು ತಿದ್ದುಪಡಿಯನ್ನು ಇಟ್ಟಿದ್ದಾರೆ, ಇದು ಬಹಳ ಸ್ವಾಗತಾರ್ಹವಾಗಿರತಕ್ಕದ್ದು. ನೀವು ಅನೇಕ ಬಿಲ್‌ಗಳನ್ನು, ತಿದ್ದುಪಡಿಗಳನ್ನು ತರುತ್ತೀರಿ. ಆದರೆ ಇದೊಂದು ಮಾತ್ರ ಸ್ವಾಗತಾರ್ಹವಾಗಿರತಕ್ಕ ತಿದ್ದುಪಡಿಯನ್ನು ತಂದಿದ್ದೀರಿ. ಈ ರೀತಿ ವ್ಯವಸ್ಥಿತವಾಗಿರತಕ್ಕಂಥ ತಿದ್ದುಪಡಿ ಬಂದಾಗ ಏನನ್ನಿಸುತ್ತದೆ ಎಂದರೆ, ಇದೇರೀತಿ ನಿಮಗೆ ಬೇರೆಯವರ ಅಭಿಪ್ರಾಯಕ್ಕೆ ಮನ್ನಣೆ ಕೊಡತಕ್ಕಂಥ ಸುದ್ಬುದ್ಧಿ ಇರಬೇಕೆಂದು ನಾನು ಹೇಳುತ್ತಿದ್ದೇನೆ. ಈ ತಿದ್ದುಪಡಿಯನ್ನು ಏನು ತಂದಿದ್ದೀರಿ ಇದನ್ನು ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಇದನ್ನು ಸಂಪೂರ್ಣವಾಗಿ ನಮ್ಮೆಲ್ಲರ ಪರವಾಗಿ ಸ್ವಾಗತ ಮಾಡುತ್ತೇನೆ. ಈಗ ಪುನ: ನಾವು ಈಗಿರತಕ್ಕಂಥ ಲೆಜಿಸ್ಲೇಚರ್ ಕಮಿಟಿಗಳ ಜೊತೆಗೆ ಇನ್ನೊಂದು ಕಮಿಟಿಯನ್ನು ಸೇರಿಸುತ್ತಿದ್ದೇವೆ. ಕಾಗದ ಪತ್ರಗಳನ್ನು ಇಡತಕ್ಕ ವಿಚಾರದಲ್ಲಿ ಅನೇಕಸಾರಿ ಈ ಸದನದಲ್ಲಿ, ಹೆಚ್ಚಾಗಿ ಆ ಕಾಗದ ಪತ್ರಗಳ ಕಡೆಗೆ ಗಮನ ಕೊಟ್ಟಿಲ್ಲ. ಹಿಂದೆ ಒಂದು ಸಾರಿ ಈ ವಿಚಾರ ಬಂದಿತ್ತು. ಅನೇಕಸಲ ಟೈಮ್ ಭಾರವಾಗಿರುತ್ತದೆ. ಕೊನೆಗೆ ಬಂದು ಇದಕ್ಕೆ ಒಪ್ಪಿಗೆ ಪಡೆಯತಕ್ಕಂಥ ವಿಚಾರಗಳು ಇವೆ, ಪಾರ್ಲಿಮೆಂಟಿನಲ್ಲಿ ಸಮಿತಿ ಇರತಕ್ಕಂಥ ವಿಚಾರ

ಕೇಳಿದ್ದೇವೆ. ಇದು ಬಹಳ ಸ್ವಾಗತಾರ್ಹವಾಗಿರತಕ್ಕ ವಿಚಾರ. ಇದರ ಸದಸ್ಯರನ್ನು ನಾಮಕರಣ ಮಾಡತಕ್ಕದ್ದಕ್ಕೆ ಅಧ್ಯಕ್ಷರಿಗೆ ಅವಕಾಶ ಕೊಡಬೇಕಾಗುತ್ತದೆ. ಈ ಮನೆಯಿಂದ ಆ ಸದಸ್ಯರು ಆ ಮನೆಯಿಂದ ಈ ಸದಸ್ಯರು ಇದರಲ್ಲಿ ಇರುತ್ತಾರೆ ಇದು ಚರ್ಚೆ ಮಾಡತಕ್ಕ ವಿಚಾರ ಅಲ್ಲ. ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಒಳ್ಳೆಯ ತಿದ್ದುಪಡಿ ತಂದಿದ್ದಾರೆ. ಇದನ್ನು ಸ್ವಾಗತ ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಈ ರೀತಿಯಾಗಿರಶಕ್ಕಂಥ ಒಳ್ಳೆಯ ವಿಚಾರ ತಂದಿರುವುದು ಮಾನ್ಯ ಲಕ್ಷ್ಮೀಸಾಗರ್‌ರವರು ಮೊಟ್ಟಮೊದಲನೆಯ ಬಾರಿ. ಇಂತಹದ್ದನ್ನು ತೆಗೆದುಕೊಂಡು ಬನ್ನಿರಿ, ನಾವೆಲ್ಲಾ ಒಪ್ಪಿಗೆ ಕೊಡುತ್ತೇವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್,—ಇದನ್ನು ಸ್ವಾಗತ ಮಾಡುತ್ತೇವೆ. ಏಂದು ನಮ್ಮ ನಾಯಕರು ಹಾಗೂ ಹಿರಿಯರು ಹೇಳಿದ್ದಾರೆ. ಇದರ ಮೂರನೆಯ ಕಲಮ್ ಏನಿದೆ ಇದನ್ನು ತಿದ್ದುಪಡಿ ಮಾಡಿದರೆ ಒಳ್ಳೆಯದೆಂದು ನನಗನ್ನಿಸುತ್ತದೆ. ಸಮಿತಿಯ ಅವಧಿ ಒಂದು ವರ್ಷ ಏನಿದೆ, ಅದನ್ನು ಎರಡೂವರೆ ವರ್ಷ ಮಾಡುವುದು ಒಳ್ಳೆಯದು. ಇದರಿಂದ ಮೇಲಿಂದ ಮೇಲೆ ತೊಂದರೆ ಯಾಗುತ್ತದೆ. ಆದುದರಿಂದ ಇದರ ಅವಧಿಯನ್ನು ಎರಡೂವರೆ ವರ್ಷ ಮಾಡುವುದು ಒಳ್ಳೆಯದೆಂದು ನಾನು ಸೂಚನೆ ಮಾಡುತ್ತೇನೆ, ಮತ್ತು ತಾವು ಇದನ್ನು ಗಮನಿಸಿ ತಿದ್ದುಪಡಿ ತಂದರೆ ಒಳ್ಳೆಯದಾಗುತ್ತದೆಂದು ನನಗನ್ನಿಸುತ್ತದೆ.

ಶ್ರೀ ಕೆ. ಬಿ. ಕೋಳಿವಾಡ್.—ಇದರಲ್ಲಿ ಸದಸ್ಯರು ಸದನದಲ್ಲಿ ಪ್ರಸ್ತಾಪಿಸತಕ್ಕದ್ದಲ್ಲ ಎಂದು ಏನಿದೆ ಅದನ್ನು ಬದಲಾವಣೆ ಮಾಡಿದರೆ ಒಳ್ಳೆಯದು.

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಇತರ ಸಮಿತಿಗಳ ಅವಧಿ ಕೂಡಾ ಒಂದು ವರ್ಷವಾಗಿದೆ. ಏತಕ್ಕೆ ಹೀಗೆ ಮಾಡಿರುತ್ತೇವೆ ಎಂದರೆ, ನಾನು ಹಿಂದ ವಿರೋಧ ಪಕ್ಷದ ಸದಸ್ಯನಾಗಿದ್ದಾಗ ಮೂರು ನಾಲ್ಕು ಸಮಿತಿಗಳಲ್ಲಿ ಕೆಲಸ ಮಾಡಿದ್ದೇನೆ ಒಂದೊಂದು ಸಲ ಅನ್ನಿಸುತ್ತದೆ. ಈ ಪಿ.ಯು.ಸಿ.ಗಳಲ್ಲಿ ಒಂದು ವರ್ಷದ ಅವಧಿಯಲ್ಲಿ ಏನೂ ಮಾಡುವುದಕ್ಕೆ ಆಗುವುದಿಲ್ಲವೆಂದೂ ಅದನ್ನು ತಿಳಿದು ಕೊಳ್ಳುವುದಕ್ಕೆ ಕಷ್ಟವಾಗುತ್ತದೆ ಎಂದು ನನಗೆ ಗೊತ್ತಿದೆ. ಇದಕ್ಕೆ ಮೂರುನಾಲ್ಕು ತಿಂಗಳಾಗುತ್ತದೆ. ಆದರೂ ಸಹ ನಾವು ಈ ಸಭೆಯಲ್ಲಿ ೨೨೫ ಜನ ಸದಸ್ಯರಿದ್ದೇವೆ. ಒಬೊಬ್ಬರಿಗೆ ಎರಡು ಮೂರು ವರ್ಷ ಅವಕಾಶ ಕೊಟ್ಟರೆ ಕೆಲವರಿಗೆ ಸಮಿತಿಗಳಲ್ಲಿ ಕೆಲಸ ಮಾಡುವ ಅವಕಾಶವೇ ಸಿಗುವುದಿಲ್ಲ. ಎಲ್ಲರಿಗೂ ಅವಕಾಶ ಸಿಗಬೇಕು. ಎಲ್ಲಾ ಸಮಿತಿಗಳಲ್ಲಿ ಕೂಡಾ ಒಬ್ಬೊಬ್ಬರು ಸದಸ್ಯರಿಗೆ ಒಂದೊಂದು ವರ್ಷವಾದರೂ ಅವಕಾಶ ಬರತಕ್ಕ ರೀತಿಯಲ್ಲಿ ಒಂದು ವರ್ಷದ ಅವಧಿಯನ್ನು ಮಾಡಿದ್ದೇವೆ. ಬೇರೆ ಸಮಿತಿಯಲ್ಲಿ ಮಾಡಿದವರನ್ನು ಇಲ್ಲಿಯೂ ಅನುಸರಿಸಿದ್ದೇವೆ, ಆದುದರಿಂದ ಇದಕ್ಕೆ ಪ್ರತ್ಯೇಕವಾಗಿ ಅವಧಿಯನ್ನು ವಿಸ್ತಾರ ಮಾಡತಕ್ಕದ್ದು ಚೆನ್ನಾಗಿ ಕಾಣುವುದಿಲ್ಲ. ಎಲ್ಲಾ ಸದಸ್ಯರಿಗೂ ಸಹ ಅವಕಾಶ ಸಿಗಬೇಕು. ಕೆಲವು ಸದಸ್ಯರಿಗೆ ಹಿಂದಿನ ಸಭೆಗಳಲ್ಲಿ, ಎಂದರೆ ೧೯೭೮ ರಿಂದ ೮೫ ರವರೆಗೆ ಸಮಿತಿಗಳಲ್ಲಿ ಸದಸ್ಯತ್ವವೇ ಸಿಗಲಿಲ್ಲ. ಇಂತಹ ಒಂದು ಸನ್ನಿವೇಶ ಬರುತ್ತದೆ, ಇದನ್ನು ತಪ್ಪಿಸಿವುದಕ್ಕೋಸ್ಕರ ಒಂದೊಂದು ಸಮಿತಿಯ ಸದಸ್ಯತ್ವದ ಕಾಲಾವಧಿಯನ್ನು ಒಂದೊಂದು ವರ್ಷ ಮಾಡಿದ್ದೇವೆ. ಇದರಿಂದ ಎಲ್ಲಾ ಸದಸ್ಯರಿಗೂ ಅವಕಾಶ ಸಿಗತಕ್ಕಂಥ ಅವಕಾಶ ಬರುತ್ತದೆ. ಈ ಉದ್ದೇಶದಿಂದ ಇದನ್ನು ಮಾಡಿದ್ದೇವೆ. ಇದರ ಕಾರ್ಯವಿಧಾನ ನಡೆಯುವಾಗ ಮುಂದೆ ಹೇಗೆ ಬರುತ್ತದೆಯೋ ಹಾಗೆ ನೋಡೋಣ.

ಶ್ರೀ ಬಿ. ಸ್ವಾಮಿರಾವ್.—ಸಮಿತಿ ಹೆಸರೇನು ಎಂದೂ ನಾಮಕರಣ ಮಾಡಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಸಭೆಯ ಮುಂದೆ ಮಂಡಿಸಲಾದ ಕಾಗದ ಪತ್ರಗಳನ್ನು ಪರಿಶೀಲಿಸುವ ಸಮಿತಿ.

ಶ್ರೀ ಆರ್. ವೆಂಕಟರಾಮಯ್ಯ.—ಒಂದು ವಿಷಯ ಇದೆ. ದಿನವೂ ನಾವು ಕೇಳುತ್ತಿದ್ದೇವೆ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆ ಎಂದು ತಾವು ಪೇಳಿಬಿಡುತ್ತೀರಿ, ಆದರೆ ಅದನ್ನು ಸದಸ್ಯರಿಗೆ ಸಪ್ಲೈ ಮಾಡುವುದಿಲ್ಲ. ಇದಂ ವಿನಿಂಗ್ ಪುಲ್ ಆಗಬೇಕಾದರೆ

"Government shall supply all papers laid on the table of the House to the Members in advance or at the time when they are to be laid on the table for the consideration of Members"

ಈ ರೀತಿ ರೆಗ್ (ಎ) (೧) ಗೆ ಒಂದು ಅಮೆಂಡ್‌ಮೆಂಟ್ ಮಾಡಬೇಕು.

ಸಭೆಯ ಮುಂದಿಡುವ ಕಾಗದಪತ್ರಗಳು ಏನಿವೆ. ಅವು ಪಾಲಿಸಿ ಡಾಕ್ಯುಮೆಂಟ್ ಆಗಿರಬಹುದು ಅಥವಾ ಇತರೆ ಮುಖ್ಯವಾದ ಡಾಕ್ಯುಮೆಂಟ್ ಆಗಿರಬಹುದು ಕೆಲವು ಪೇಪರ್ಸ್ ನಮಗೆ ಬರುತ್ತಿಲ್ಲ ? ಬರುವುದಕ್ಕೆ ವ್ಯವಸ್ಥೆ ಮಾಡಬೇಕು. ಇದನ್ನು ಕಮಿಟಿಯವರು ನೋಡಬೇಕು. ಇಲ್ಲದೇಹೋದರೆ ಕಮಿಟಿ ಉದ್ದೇಶ ಸಫಲವಾಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಒಂದು ವರ್ಷ ಈ ಸಮಿತಿ ಕೆಲಸ ಮಾಡಲಿ. ಯಾವ ಯಾವ ತೊಂದರೆಗಳು, ಲೋಪದೋಷಗಳು ಇವೆಯೆಂದು ಮಾನ್ಯ ವೆಂಕಟರಾಮಯ್ಯನವರು ಹೇಳುತ್ತಾರೆ, ಅವನ್ನು ಸರಿಪಡಿಸುವುದಕ್ಕೆ ಈ ಸಮಿತಿಯನ್ನು ಮಾಡುತ್ತಿದ್ದೇವೆ. ಈ ವರ್ಷ ಕೆಲಸ ಮಾಡಿದ ಮೇಲೆ, ಇದರಲ್ಲಿ ಏನೇನು ಲೋಪದೋಷಗಳು ಬರುತ್ತವೆ ಅವುಗಳನ್ನು ಬದಲಾವಣೆ ಮಾಡುವುದಕ್ಕೆ ಈ ಸಭೆಗೆ ಅಧಿಕಾರ ಇದೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ,

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡುವಳಿಕೆಯ ನಿಯಮಗಳ ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಅಂಗೀಕಾರ ಪ್ರಸ್ತಾವ

*ಶ್ರೀ ಎ. ಲಕ್ಷ್ಮೀಸಾಗರ್.—ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡುವಳಿಕೆಯ ನಿಯಮಗಳ ತಿದ್ದುಪಡಿ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇವೆ.

ಅಧ್ಯಕ್ಷರು.—"ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡುವಳಿಕೆಯ ನಿಯಮಗಳ ತಿದ್ದುಪಡಿ ವಿಧೇಯಕವನ್ನು ಅಂಗೀಕರಿಸುವುದು"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ತಿದ್ದುಪಡಿಯನ್ನು ಅನುಮೋದಿಸಲಾಯಿತು)

(ii) ೧೯೮೬ನೇ ಭಾರತೀಯ ರಾಷ್ಟ್ರೀಯ ಕಾನೂನು ಶಾಲೆ ವಿಧೇಯಕ ಮಂಡಿಸಲು ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಶಿಕ್ಷಣ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಭಾರತೀಯ ರಾಷ್ಟ್ರೀಯ ಕಾನೂನು ಶಾಲೆ ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—೧೯೮೬ನೇ ಇಸವಿಯ ಭಾರತೀಯ ರಾಷ್ಟ್ರೀಯ ಕಾನೂನು ಶಾಲೆ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಂಡನೆಗೆ ಅನುಮತಿ ನೀಡಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಭಾರತೀಯ ರಾಷ್ಟ್ರೀಯ ಕಾನೂನು ಶಾಲೆಯ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

* * * *

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಯಿತು.